ನಂಬರು 1028-1042—116.

ಇಂಡಿಯಾ ಗವರ್ನಮೆಂಟ್.

ವ್ಯಾಪಾರದ ಮತ್ತು ಕೈಗಾರಿಕೆಯ ಇಲಾಖಾ.

ಎಮಿಗ್ರೇಷ್ಯನ್ ಯಾ ವಲಸೆ ಹೋಗೋಣ

ರೆಸೊಲ್ಯೂಷ್ಯನ್ ಯಾ ತೀರ್ಮಾನ.

ತಾರೀಖು 31ನೆ ಜನವರಿ 1907, ಕಲ್ಕತ್ತಾ.

1902ನೆ ಇಸವಿಯ ಇಮಿಗ್ರೇಷ್ಯನ್ ಯಾ ವಲಸೆ ಆಕ್ಟನ್ನು ರದ್ದು ಮಾಡುವದಕ್ಕೋಸ್ಕರ ಕೇಪ್ ಕಾಲನಿಯ ಪಾರ್ಲಿಮೆಂಟ್ ಯಾ ಸಭೆಯಿಂದ ಮಂಜೂರಾದ ಒಂದು ಬಿಲ್ ಯಾ ಕಾನೂನಿನ ನಕಲು ಇಂಡಿಯಾ ದೇಶದ ಶ್ರೀವರ್ಮಾ ಚಕ್ರವರ್ತಿಯವರ ಇಂಡಿಯಾ ಸ್ಟೇಟ್ ಸೆಕ್ರೆಟೇರಿಯವರಿಂದ ಇಂಡಿಯಾ ಸರ್ಕಾರದವರಿಗೆ ತಲುಪಿರುತ್ತದೆ. ಸದರಿ ಇಮಿಗ್ರೇಷ್ಯನ್ ಆಕ್ಟಿನಿಂದ ಕೆಲವು ಭಾಗಗಳನ್ನು ತೆಗೆದು 1903ನೆ ಇಸವಿಯ ಫೆಬ್ರವರಿ 20ನೆ ತಾರೀಖಿನ 4-2—4ನೆ ನಂಬರಿನ ರೆಸೊಲ್ಯೂಷ್ಯನ್ ಯಾ ತೀರ್ಮಾನದೊಡನೆ ಇಂಡಿಯಾ ಗೆಜೆಟ್ಟಿನಲ್ಲಿ ಪ್ರಕಟಿಸಿತ್ತು. "1906ನೆ ಇಸವಿಯ ಇಮಿಗ್ರೇಷ್ಯನ್ ಆಕ್ಟು" ಎಂದು ಹೆಸರುಳ್ಳ ಈ ಕಾನೂನಿನ ಮುಖ್ಯವಾದ ನಿಯಮಗಳನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಈ ಕೆಳಗೆ ಸೂಚಿಸಿ ಇದೆ :

2. ಈಗ ಮಾಡಿದ ಮುಖ್ಯವಾದ ಬದಲಾವಣೆಯು ಯಾವುದೆಂದರೆ—1902ನೆ ಇಸವಿಯ ಆಕ್ಟಿನ ಪ್ರಕಾರ ದಕ್ಷಿಣ ಆಫ್ರಿಕಾದಲ್ಲಿ ನೆಲೆಯಾಗಿ ವಾಸವಮಾಡಿಕೊಂಡು ನಿಂತ ವಿಷ್ಯಾಖಂಡದ ಜನರನ್ನು "ವಲಸೆ ಬರದಂತೆ ನಿಷೇಧಿಸಲ್ಪಟ್ಟವು" ಜನರ ತರಗತಿಯಲ್ಲಿ ಸೇರಿಸಿರಲಿಲ್ಲ; ಆದರೆ, ಈಗಿನ ಬಿಲ್ ಯಾ ಕಾನೂನು ಆ ದೇಶದಲ್ಲಿ ಹುಟ್ಟಿದ ಜನರನ್ನು ಮಾತ್ರ ವಿನಾಯಿಸುತ್ತದೆ. ಪರಂತು, ಸದರಿ ಕಾಲನಿಯಲ್ಲಿ ಕಾನೂನಿನ ಮೇರೆಗೆ ವಾಸ ಮಾಡುವ ವಿಷ್ಯಾಖಂಡದ ಜನರು, ಕಾಲನಿಯ ಗವರ್ನರು ಮಂಜೂರ್ಮಾಡುವ ರೆಗ್ಯುಲೇಷನುಗಳ ಮೇರೆಗೆ ಕೊಡುವ ರಹದಾರಿಗಳನ್ನಿಟ್ಟುಕೊಂಡು ಸ್ವಲ್ಪ ಕಾಲದ ಮಟ್ಟಿಗೆ ಆಲ್ಲಿಂದ ಗೈರುಹಾಜರಾಗುವಂತೆ ಅಪ್ಪಣೆ ಕೊಟ್ಟಿದೆ.

3. ಇಂಡಿಯಾ ದೇಶದ ಜನರಿಗೂ, ತತ್ಕಾಲಿ ಕೇಪ್ ಕಾಲನಿಗೆ ವಲಸೆ ಹೋಗುವುದು ಬಹಳ ವಾಡಿಕೆಯಾಗಿದೆ ಎಂದು ತೋರುವ ಸ್ಥಳಗಳ ನಿವಾಸಿಗಳಿಗೂ ಈ ಕಾನೂನಿನ ನಿಯಮಗಳು ಸಾಮಾನ್ಯತಃ ತಿಳಿಯುವಂತೆ ಮಾಡುವುದಕ್ಕೆ ಯಾವ ಏರ್ಪಾಡುಗಳು ಸರಿಯಾದವುಗಳೆಂದು ತೋರುತ್ತವೆಯೊ ಅಂಥಾ ಏರ್ಪಾಡುಗಳನ್ನು ಎಲ್ಲಾ ಸ್ಥಳೀಯ ಸರ್ಕಾರದವರೂ ಮಾಡಬೇಕೆಂತ ಸಭಾಸದೇತರಾದ ಗವರ್ನರ್ ಜನರಲ್ ರವರು ಪಾರ್ಥಿಸುತ್ತಾರೆ. ಈ ಕಾಲನಿಗೆ ವಲಸೆ ಹೋಗಬೇಕೆಂದು ಉದ್ದೇಶಿಸಿರುವವರಿಗೆ ಹಾಗೆ ಮಾಡುವುದರಲ್ಲಿ ತಮಗೆ ಉಂಟಾಗಬಹುದಾದ ಕಷ್ಟಗಳನ್ನು ಕುರಿತು ಅವರು ಹಡಗನ್ನೇರುವ ರೇವುಗಳಲ್ಲಿ ಎಚ್ಚರಿಸತಕ್ಕದ್ದು.

"2. ಈ ಆಕ್ಟನ್ನು ಏರ್ಪಡಿಸುವುದರಲ್ಲಿ, ಈ ಕೆಳಗೆ ಹೇಳುವ ಮಾತುಗಳು, ಪ್ರತಿಕೂಲವಾದ ಅಭಿಪ್ರಾಯವು ತೋರಿದರೆ ಹೊರತು, ಆಯಾಯ ಮಾತುಗಳಿಗೆ ಇದರಿಂದ ಕೊಡಲ್ಪಟ್ಟ ಅರ್ಥಗಳನ್ನೇ ಉಂಟಾಗಿರತಕ್ಕದ್ದು. ಹೇಗೆಂದರೆ :—

'ಹಡಗು' ಎಂಬ ಮಾತು ಯಾವ ಹಡಗನ್ನಾಗಲಿ, ಪಾತ್ರವನ್ನಾಗಲಿ, ದೋಣಿಯನ್ನಾಗಲಿ, ಅಥವಾ ಸಮುದ್ರಯಾನದಲ್ಲಿ ಉಪಯೋಗಿಸುವ ಅದರ ವಿವರಣೆಯನ್ನಾಗಲಿ ಒಳಗೊಂಡಿರತಕ್ಕದ್ದು.

'ಮ್ಯಾಸ್ಟರ್ ಯಾ ಯಜಮಾನ' ಎಂಬುದು ಯಾವುದಾದರೂ ಹಡಗನ್ನು ವಶದಲ್ಲಿಟ್ಟುಕೊಂಡಿರುವ ಅಥವಾ ಅದರ ಅಧಿಕಾರವುಳ್ಳ, ನಾವಿಕನು ವಿನಾ, ಬಾಕಿ ಯಾವ ಮನುಷ್ಯನನ್ನಾದರೂ ಒಳಗೊಂಡಿರತಕ್ಕದ್ದು.

'ವಲಸೆ ಬರುವವನು' ಎಂಬುದು ಈ ಕಾಲನಿಯ ಹೊರಗಿನಿಂದ ನೇರವಮೇಲೆ ಆಗಲಿ ನೀರಿನಮೇಲೆ ಆಗಲಿ ಬಂದು ಪ್ರವೇಶಿಸುವ ಅಥವಾ ಪ್ರವೇಶಿಸಬೇಕೆಂದು ಕೇಳುವ ಯಾವ ಮನುಷ್ಯನೆಂಬುಗೆಲಿ ಅರ್ಥವಾಗತಕ್ಕದ್ದು ಮತ್ತು ಅಂಥಾ ಯಾವ ಮನುಷ್ಯನನ್ನಾಗಲಿ ಒಳಗೊಂಡಿರತಕ್ಕದ್ದು.

"3. ಈ ಆಕ್ಟಿನ ನಿಯಮಗಳಿಗೊಳಪಟ್ಟು, ಈ ಕೆಳಗೆ ನಮೂದಿಸುವ ತರಗತಿಗಳ ಜೈಕಿ ಯಾವುದಾದರೂ ತರಗತಿಯ ಅಥವಾ ತರಗತಿಯವನೆಂದು ತೋರುವ ಅನ್ಯದೇಶದಿಂದ ವಲಸೆಬರುವ ಯಾವನಾದರೂ ಈ ಕಾಲನಿಗೆ ಭೂಮಾರ್ಗವಾಗಿಯಾಗಲಿ ಸಮುದ್ರಮಾರ್ಗವಾಗಿಯಾಗಲಿ ಬಂದು ಪ್ರವೇಶಿಸುವುದು ಅಕ್ರಮವಾಗಿರತಕ್ಕದ್ದು; ಮತ್ತು ಹಾಗೆ ವಲಸೆ ಬರುವ ಪ್ರತಿ ಮನುಷ್ಯನೂ "ವಲಸೆ ಬರಕೂಡದೆಂದು ನಿಷೇಧಿಸಲ್ಪಟ್ಟವ" ನೆಂದು ಹೇಳಲ್ಪಡತಕ್ಕದ್ದು :—

(a) ಮಿನಿಸ್ಟರ್ ಯಾ ಪ್ರಧಾನಾಧಿಕಾರಿಯು ಒಪ್ಪುವಂತೆ ಬಂದು ಅರ್ಜಿಯನ್ನು ಯೂರೋಪ್ ದೇಶದ ಯಾವುದಾದರೂ ಭಾಷೆಯ ಅಕ್ಷರಗಳಲ್ಲಿ ಬರೆದು ರುಜು ಮಾಡಬೇಕೆಂದು ಕಾನುವಾಗಿ ಅಧಿಕಾರ ಹೊಂದಿದ ಯಾವ ಆಫೀಸರಿಂದಲಾಗಲಿ ಕೇಳಲ್ಪಟ್ಟಾಗ, ವಿದ್ಯಾಭ್ಯಾಸದ ನ್ಯೂನತೆಯಿಂದ ತಾನೇ ಬರದು ರುಜು ಮಾಡುವದಕ್ಕೆ ಬಾರದ ಯಾವನಾದರೂ ಮನುಷ್ಯನು; ಪರಂತು ಈ ಒಳ ಪ್ರಕರಣದ ಉದ್ದೇಶಗಳಿಗಾಗಿ ಡಚ್ಚಿಷ್ ಎಂಬ ಭಾಷೆಯನ್ನು ಯೂರೋಪ್ ದೇಶದ ಭಾಷೆಯಾಗಿ ಅಂಗೀಕರಿಸತಕ್ಕದ್ದು

(b) ಪ್ರತ್ಯಕ್ಷವಾಗಿ ಕಾಣಿಸುವ ಜೀವನೋಪಾಯವಿಲ್ಲದೆ, ಅಥವಾ ತನ್ನ ಪೋಷಣೆಯ ಭಾರವನ್ನು ಸರ್ಕಾರದವರ ಮೇಲೆ ಹಾಕುವಂತೆ ತೋರುವ, ಯಾವನಾದರೂ ಮನುಷ್ಯನು.

* * * *

"4. ಹಿಂದಿನ ಪ್ರಕರಣದ ನಿಯಮಗಳು ಈ ಕೆಳಗೆ ನಮೂದಿಸುವ ಯಾವುದಾದರೂ ತರಗತಿಗೆ ಸೇರುವ ಯಾವ ಮನುಷ್ಯನಿಗೂ ಲಗಾವಾಗಕೂಡದು:—

* * * * *

(e) ಈ ಆಕ್ಟಿನ ನಿಯಮಗಳ ಮೇರೆಗೆ ಕಾಲನಿಗೆ ವಲಸೆ ಬರುವಂತೆ ಅನುಮತಿಹೊಂದಿದ ಯಾವನಾದರೂ ಮನುಷ್ಯನ ಹೆಂಡತಿ ಮತ್ತು 16 ವರ್ಷ ವಯಸ್ಸಿನೊಳಗೆ ಇರುವ ಅವನ ಯಾವುದಾದರೂ ಮಗು.

(f) (a) ದಕ್ಷಿಣ ಆಫ್ರಿಕಾದಲ್ಲಿ ಹುಟ್ಟಿದವರು.

(b) ಯೂರೋಪ್ ದೇಶದಲ್ಲಿ ಹುಟ್ಟಿ ದಕ್ಷಿಣ ಆಫ್ರಿಕಾ ದೇಶದಲ್ಲಿ ನೆಲೆಯಾಗಿ ವಾಸವಾಡಿಕೊಂಡಿರುವವರು.

* * * * *

(g) ಸ್ವಲ್ಪಕಾಲದ ಮಟ್ಟಿಗೆ ಕಾಲನಿಯಿಂದ ಗೈರುಹಾಜರಾಗಿರುವುದಕ್ಕೆ ಅಧಿಕಾರ ಕೊಡಲು, ಗವರ್ನರವರಿಂದ ವ್ಯವಸ್ಥಾಪಿಸಲ್ಪಡುವಂಥಾ ರೆಗ್ಯುಲೇಷನುಗಳ ಮೇರೆಗೆ ಹುಟ್ಟಿದ ರಹದಾರಿಯನ್ನು ಮಿನಿಸ್ಟರ್ ಯಾ ಪ್ರಧಾನಾಧಿಕಾರಿಯಿಂದ ತಾನು ಕಾಲನಿಯಲ್ಲಿ ಕಾನೂನುಗನುಗುಣವಾಗಿ ವಾಸವಾಡಿಕೊಂಡಿದ್ದಾಗ್ಯೂ, ಹೊಂದಿರದೆ ರಹದಾರಿಯು ಪರಭಾಷೆಗಳ ಮೇರೆಗೆ ವಾಪಸು ಬರುವ ಯಾವನಾದರೂ ಮನುಷ್ಯನು.

"5. ಈ ಆಕ್ಟಿನ ಅಥವಾ 1902ನೆ ಇಸವಿಯ ಇಮಿಗ್ರೇಷನ್ ಆಕ್ಟಿನ ನಿಯಮಗಳನ್ನು ಅತಿಕ್ರಮಿಸಿ ಭೂ ಮಾರ್ಗವಾಗಿಯಾಗಲಿ ಸಮುದ್ರದ ಮೇಲಾಗಲಿ ಈ ಕಾಲನಿಯೊಳಕ್ಕೆ ಯಾವ ಕಾಲದಲ್ಲಿಯಾಗಲಿ ಯಾರಾದರೂ ವಲಸೆ ಬಂದದ್ದು ತಿಳಿಯಬಂದರೆ ಅಂಥಾ ಮನುಷ್ಯನು 50 ಪೌಂಡುಗಳ ದಂಡಕ್ಕೆ, ಅಥವಾ ಮೂರು ತಿಂಗಳ ಕಠಿಣ ಅಥವಾ ಸಾಧಾರಣ ಸಜಾವಿಗೂ ಮತ್ತು ಅವನನ್ನು ಯಾವಕಾಲದಲ್ಲಿಯಾದರೂ ಕಾಲನಿಯ ಸರಹದ್ದಿನಿಂದ ಹೊರಗೆ ಕಳುಹಿಸಲ್ಪಡುವುದಕ್ಕೂ ಮತ್ತು ಹಾಗೆ ಹೊರಗೆ ಕಳುಹಿಸಲ್ಪಡುವ ವರಿಗೆ ರೆಗ್ಯುಲೇಷನಿನಿಂದ ವಿಧಿಸಲ್ಪಡಬಹುದಾದ ಪಹರೆಯಲ್ಲಿ ಇಡಲ್ಪಡುವುದಕ್ಕೂ ಗುರಿಯಾಗತಕ್ಕದ್ದು.

"6. ಒಂದು ಹಡಗಿನ ಯಜಮಾನನು ತನಗೆ ತಿಳಿದೂ, ಪ್ರತ್ಯಕ್ಷವಾಗಿಯಾಗಲಿ ಪರೋಕ್ಷವಾಗಿಯಾಗಲಿ ಯಾವ ವಲಸೆಗಾರನನ್ನಾದರೂ ತನ್ನ ಹಡಗನ್ನು ಬಿಡುವುದಕ್ಕೆ ಅವ್ಪಣೆ ಕೊಟ್ಟು ತನ್ಮೂಲಕ ಸದರಿ ವಲಸೆಗಾರನು ಈ ಆಕ್ಟಿನ ಯಾವ ನಿಯಮವನ್ನಾದರೂ ಅತಿಕ್ರಮಿಸಿದರೆ, ಅಂಥಾ ಯಜಮಾನನೂ ಸದರಿ ವಲಸೆಗಾರನು ಬಿಟ್ಟುಹೋದ ಹಡಗಿನ ಒಡೆಯರೂ ಸಹ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ 100 ಪೌಂಡುಗಳ ದಂಡಕ್ಕೆ ಗುರಿಯಾಗತಕ್ಕದ್ದು, ಮತ್ತು ಇದಲ್ಲದೆ, 5 ಜನರಿಗಿಂತ ಹೆಚ್ಚಾಗಿ ಹಡಗವನ್ನಿಳಿಯುವ ಅಂಥಾ ಪ್ರತಿ ವಲಸೆಗಾರನಿಗೂ 20 ಪವನಿನಂತೆ ಹೆಚ್ಚು ದಂಡಕ್ಕೂ ಗುರಿಯಾಗತಕ್ಕದ್ದು. ಅಂಥಾ ದಂಡವನ್ನು ಕೊಡುವವರೆಗೆ ಸದರಿ ಹಡಗು ಹೋಗುಸುವುದಕ್ಕೆ ರಹದಾರಿಯನ್ನು ಕೊಡದೆ ತಿರಸ್ಕರಿಸಬಹುದು; ಮತ್ತು ಹಡಗಿನ ಯಜಮಾನನಿಂದ ಅಥವಾ ಒಡೆಯರಿಂದ ಅಥವಾ ಅವರ ಪರವಾಗಿ ದಂಡವು ಪೂರ್ತಿಯಾಗದೇ ತಪ್ಪಿದರೆ, ಸುಪ್ರೀಮ್ ಕೋರ್ಟಿನ ಹುಕುಂ ಮೇರೆಗೆ, ಅಂಥಾ ಯಾವುದಾದರೂ ದಂಡದ ವಸೂಲಿಗೋಸ್ಕರ ಹುಟ್ಟಿದ ಯಾವುದಾದರೂ ಆಜ್ಞಾ ಪತ್ರವ ಸಮಾಧಾನಕ್ಕೋಸ್ಕರ ಸದರಿ ಹಡಗನ್ನು ಜಪ್ತು ಮಾಡಿ ಅಮಲ್ದಾರಿಯಾಗುವಂತೆ ಪ್ರಕಟಿಸಬಹುದು; ಪರಂತು, ಅಂಥಾ ಹುಕುಮನ್ನು ಕೊಡುವುದಕ್ಕೆ ಬದಲಾಗಿ, ಸದರಿ ದಂಡದ ಪೂರ್ತಿ ಬಗ್ಗೆ ಸಾಕಾದ್ದೆಂದು ತೋರುವಂಥಾ ಜಾಮೀನನ್ನು ಕೋರ್ಟಿನವರು ಅಂಗೀಕರಿಸುವುದು ನ್ಯಾಯವಾಗಿರತಕ್ಕದ್ದು.

"7. ಈ ಆಕ್ಟಿನ ಅಥವಾ ಇದರ ಮೇರೆಗೆ ಮಾಡಿದ ರೆಗ್ಯುಲೇಷನುಗಳ ಯಾವುದಾದರೂ ನಿಯಮವನ್ನು ಅತಿಕ್ರಮಿಸುವುದಕ್ಕೆ ಯಾವುದಾದರೂ ರೀತಿಯಲ್ಲಿ ಯಾವನಿಗಾದರೂ ಸಹಾಯಮಾಡುವ, ಅಥವಾ ಈ ಆಕ್ಟಿನ ಉದ್ದೇಶಾರ್ಥಗಳಿಗೋಸ್ಕರ ಯಾವುದಾದರೂ ಸರ್ಟಿಫಿಕೇಟು ಅಥವಾ ಸ್ಥಿತಿಪರ್ಯನ್ನು, ತನಗೋಸ್ಕರ ಅಥವಾ ಇತರರಿಗೋಸ್ಕರ ಹೊಂದುವ ಉದ್ದೇಶದಿಂದ ಒಂದು ಸುಳ್ಳು ಪ್ರಕಟನೆಯನ್ನು ಮಾಡುವ, ಅಥವಾ ಈ ಆಕ್ಟಿನ ನಿಯಮಗಳನ್ನು ಉಪಾಯದಿಂದ ತಪ್ಪಿಸಿಕೊಳ್ಳುವ ನಿಮಿತ್ತ ಯಾವುದಾದರೂ ಕರಾರು ಮಾಡಿಕೊಳ್ಳುವ, ಯಾವ ಮನುಷ್ಯನಾಗಲಿ 100 ಪವನುಗಳಿಗೆ ಮೀರದ ಜುರ್ಮಾನೆಗೆ ಗುರಿಯಾಗತಕ್ಕದ್ದು. ಅಥವಾ 6 ತಿಂಗಳಿಗೆ ಮೀರದ ಕಠಿಣ ಅಥವಾ ಸಾಧಾರಣ ಸಜಾಕ್ಕೆ ಗುರಿಯಾಗತಕ್ಕದ್ದು.

"8. ಈ ಆಕ್ಟಿನ ನಿಯಮಗಳನ್ನು ಮೀರಿ ಮತ್ತು ಅವುಗಳಿಗೆ ವಿರೋಧವಾಗಿ ಈ ಕಾಲನಿಗೆ ಅನ್ಯದೇಶದಿಂದ ವಾಸಕ್ಕೋಸ್ಕರ ಬರುವುದನ್ನು ನಿಲ್ಲಿಸುವುದಕ್ಕಾಗಿ ಆಗ್ಗಾಗ್ಗೆ ಪ್ರಕಟಿಸುವುದರ ಮೂಲಕ ರೆಗ್ಯುಲೇಷನುಗಳನ್ನು ಮಾಡುವುದೂ, ಮತ್ತು ಅಂಥಾ ರೆಗ್ಯುಲೇಷನುಗಳನ್ನು ಕಾಲನಿಯ ಸರಹದ್ದುಗಳ ಒಳಗೂ ಹೊರಗೂ ಜಾರಿಯಲ್ಲಿ ತರುವದಕ್ಕೆ ಅಧಿಕಾರಿಗಳನ್ನು ನೇಮಿಸುವುದೂ, ಇತರ ದೇಶಗಳಿಂದ ಈ ಕಾಲನಿಗೆ ಬಂದು ಅಲ್ಲಿ ನೆಲೆಯಾಗಿ ನಿಲ್ಲದಂತೆ ಈ ಆಕ್ಟಿನ ನಿಯಮಗಳ ಮೇರೆಗೂ ನಿಯಮಗಳ ಬಲದ ಮೇಲೆಯೂ ನಿಷೇಧಿಸಲ್ಪಟ್ಟ ಯಾವ ಜನರನ್ನಾಗಲಿ ಕಾಲನಿಯ ಸರಹದ್ದುಗಳಿಂದ ಹೊರಗೆ ಕಳುಹಿಸುವುದಕ್ಕೆ ತಕ್ಕ ಏರ್ಪಾಡು ಮಾಡುವುದೂ, ಹಾಗೆ ಅವರನ್ನು ಹೊರಗೆ ಕಳುಹಿಸುವವರೆಗೆ ಹಂಗಾಮಿಯಾಗಿ ಅವರ ಪಹರೆ, ಮೇಲ್ವಿಚಾರಣೆ ಮತ್ತು ವಸತಿಗೆ ತಕ್ಕ ಏರ್ಪಾಡು ಮಾಡುವುದೂ, ಗವರ್ನರಿಂದ ಮಂಜೂರ್ಮಾಡಲ್ಪಟ್ಟ ಪದ್ಧತಿಗನುಸಾರವಾಗಿ ಇತರ ದೇಶದಿಂದ ವಾಸಕ್ಕಾಗಿ ಬರುವ ಜನರ ಅಮದು ಖರಮಾಡಿಕೊಳ್ಳೋಣ ಸ್ಥಳ್ಳವಸತಿ ಸಂರಕ್ಷಣೆ, ರಿಜಿಸ್ಟ್ರೇರ್ ಹಂಚಿಕೆ, ಮತ್ತು ಬೆಸಂಬಡಿಕೆಗಳಿಗೆ ಕೆಲಸಕೊಡುವುದು—ತಕ್ಕ ಏರ್ಪಾಡು ಮಾಡುವುದೂ ಸಹ ಗವರ್ನರವರಿಗೆ ನ್ಯಾಯವಿಹಿತವಾಗಿರತಕ್ಕದ್ದು; ಮತ್ತು ಅಂಥಾ ರೆಗ್ಯುಲೇಷನುಗಳ ಮೇರೆಗೆ ಸರ್ಟಿಫಿಕೇಟುಗಳನ್ನೂ ಇತರ ದಸ್ತೈವೇಜುಗಳನ್ನೂ ಕೊಡುವ ಬಗ್ಗೂ ಮತ್ತು ಅವುಗಳ ಫೀಜಿನ ಪಾವತಿಯ ಬಗ್ಗೂ ಏರ್ಪಾಟು ಮಾಡುವುದೂ, ಇತರ ದೇಶಗಳಿಂದ ಬಂದು ವಾಸಮಾಡದಂತೆ ನಿಷೇಧಿಸಲ್ಪಟ್ಟ ಜನರು ಕಾಲನಿಯ ಮುಖಾಂತರ ಹೋಗುವುದಕ್ಕಾಗಲಿ ಅಲ್ಲಿಯೇ ಕೆಲವು ದಿವಸ ಹಂಗಾಮಿಯಾಗಿ ಇರುವುದಕ್ಕಾಗಲಿ ಏರ್ಪಾಡು ಮಾಡುವುದೂ, ಮತ್ತು ಅವರಿಗೆ ಕೊಟ್ಟ ಕಾಲದ ಒಳಗಾಗಿ ಅವರು ಕಾಲನಿಯಲ್ಲಿ ಪ್ರಯಾಣ ಮಾಡುವುದಕ್ಕೆ ಅಥವಾ ಕಾಲನಿಯನ್ನು ಬಿಟ್ಟು ಹೋಗುವುದಕ್ಕೆ, ಮತ್ತು ಈ ಆಕ್ಟಿನ ಉದ್ದೇಶಗಳು ಸಾಮಾನ್ಯವಾಗಿ ನೆರವೇರುವುದಕ್ಕೆ ತಕ್ಕ ಜಾಮೀನು ಡಿಪಾಜಿಟುಗಳನ್ನು ವಿಧಿಸುವುದೂ ಗವರ್ನರವರಿಗೆ ನ್ಯಾಯವಾಗಿರತಕ್ಕದ್ದು.

"9. ಈ ಶಕ್ಕಿನ ಮೇರೆಗೆ ಗವರ್ನರಿಂದ ಮಾಡಲ್ಪಟ್ಟ ಯಾವುದಾದರೂ ರೆಗ್ಯುಲೇಷನಿನ ಉಲ್ಲಂಘನೆಗೆ ದಂಡನೆಗಳನ್ನು ವಿಧಿಸುವುದೂ ಅವರಿಗೆ ನ್ಯಾಯವಾದದ್ದು. ಆದರೆ, ಯಾವ ಒಂದು ಉಲ್ಲಂಘನೆಯ ಬಗ್ಗೆ ವಿಧಿಸುವ ದಂಡವೂ 100 ಪೌಂಡುಗಳ ಜುರ್ಮಾನೆಗಾಗಲಿ ಅಥವಾ ಅದನ್ನು ತೆರುವುದಕ್ಕೆ ತಪ್ಪಿದರೆ, 12 ತಿಂಗಳ ಕಠಿಣ ಅಥವಾ ಸಾಧಾರಣ ಸಜಾವಿಗಾಗಲಿ ವಿಸ್ತರಿಸಕೂಡದು, ಅಥವಾ ಜುರ್ಮಾನೆಯು ವಿಕಲ್ಪವಿಲ್ಲದೆ 12 ತಿಂಗಳಿಗೆ ಮಿರಿದ ಕಠಿಣ ಅಥವಾ ಸಾಧಾರಣ ಸಜಾವಾಗಿರಕೂಡದು.

"10. ಈ ಆಕ್ಟನ್ನು '1906ನೆ ಇಸವಿಯ ಇಮಿಗ್ರೇಷನ್ ಆಕ್ಟ್' ಕರೆಯಬಹುದು."

ಮೇಲ್ಕಂಡ ರೆಸೊಲ್ಯೂಷನ್ ಯಾ ತೀರ್ಮಾನದ ಒಂದು ನಕಲನ್ನು ಸ್ಥಳೀಯ ಸರ್ಕಾರದವರಿಗೂ ಇರೇಬಿನಲ್ಲಿ ಕಂಡ ಸರ್ಕಾರಗಳಿಗೂ ತಿಳಿವಳಿಕೆ ಮತ್ತು ಅವರ ನಡವಳಿಕೆಯ ಬಗ್ಗೂ, ಹೋಂ ಮತ್ತು ಫಾರಿನ್ ಇಲಾಖೆಗಳಿಗೆ ತಿಳಿವಳಿಕೆಯ ಬಗ್ಗೂ ಕಳುಹಿಸಜೇಕೆಂತ ಹುಕುಂ ಆಗಿದೆ.

ಮದ್ರಾಸ್ ಸರ್ಕಾರದ ಸೆಕ್ರಿಟರಿ.	ಪೂರ್ವ ಬೆಂಗಾಲ್ ಮತ್ತು ಅಸ್ಸಾಂ ಸೆಕ್ರಿಟರಿ.
ಬೂಂಬಾಯಿ ಡಿಟೋ	ಮಧ್ಯಪ್ರಾಂತ್ಯಗಳ ಚೀಫ್ ಕಮಿಷನರ್.
ಬೆಂಗಾಲ್ ಡಿಟೋ	ಕೊಡಗಿನ ಚೀಫ್ ಕಮಿಷನರ್
ಸಂಯುಕ್ತ ಸಂಸ್ಥಾನಗಳ ಸೆಕ್ರಿಟರಿ	ಅಜ್ಮೀರ್-ಮಿರ್ವಾರ್‌ಗಳ ಚೀಫ್ ಕಮಿಷನರ್
ಪಂಜಾಬ್ ಡಿಟೋ	ವಾಯವ್ಯ ಸರಹದ್ದಿನ ಪ್ರಾಂತ್ಯಗಳ ಚೀಫ್ ಕಮಿಷನರ್
ಬರ್ಮಾ ಡಿಟೋ	

ಗವರ್ನರ್ ಜನರಲ್‌ರವರ ಬೆಲೂಚಿಸ್ಥಾನದ ಏಜಂಟ್.

ಇಂಡಿಯಾ ಗೆಜೆಟ್ಟಿನ ಉಪಭಾಗದಲ್ಲಿ ಬಂದು ನಕಲನ್ನು ಸಮಸ್ತರ ತಿಳಿವಳಿಕೆಯ ಬಗ್ಗೆ ಪ್ರಕಟಿತಕ್ಕದ್ದೆಂತಲೂ ಹುಕುಂ ಮಾಡಿ ಇದೆ.

ಹಬ್ಬಿಯು. ಎಚ್. ಹಾರ್ವೆ,
ಇಂಡಿಯಾ ಗವರ್ನಮೆಂಟಿನ ಸೆಕ್ರಿಟರಿ.